ಈ) ಪ್ರಸುತ್ತ ಇಲಾಖೆಯು ನಡೆಸುತ್ತಿರುವ 2 ಕ್ರೀಡಾ ಶಾಲೆಗಳಲ್ಲಿ ಒಂದನ್ನು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ವಿದ್ಯಾನಗರದಲ್ಲಿ, ಮತ್ತೊಂದನ್ನು ಕೊಡಗು ಜಿಲ್ಲೆಯಲ್ಲಿರುವ ಸೋಮವಾರಪೇಟೆ ತಾಲ್ಲೂಕಿನ ಕೊಡಿಗೆಯಲ್ಲಿ ನಡೆಸುತ್ತಿದೆ. ಸದರಿ ಶಾಲೆಗಳ ಪೈಕಿ ಒಂದು ಎರಡನೇ ದರ್ಜೆ ಸಹಾಯಕ ಮತ್ತು ಒಂದು ಗ್ರೂಪ್ - ಡಿ ನೌಕರನ ಹುದ್ದೆಗಳನ್ನು ಕೊಡಿಗೆಯಲ್ಲಿರುವ ಶಾಲೆಗೆ ಮಂಜೂರು ಮಾಡಲಾಗಿದೆ. ಪ್ರಶ್ನೆಯಲ್ಲಿ ಕೇಳಿರುವ ಉಳಿದ ಹುದ್ದೆಗಳನ್ನು ಮಂಜೂರು ಮಾಡಲಾಗಿರುವುದಿಲ್ಲ. ಆದಾಗ್ಯೂ ಸರ್ಕಾರವು ಈ ಬಗ್ಗೆ ಸದರಿ ಹುದ್ದೆಗಳನ್ನು ಮಂಜೂರು ಮಾಡುವ ಮತ್ತು ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಹುದ್ದೆಗಳನ್ನು ತುಂಬಲು ಸರ್ಕಾರಕ್ಕೆ ಅಂದಾಜು ವೆಚ್ಚ ವಾರ್ಷಿಕವಾಗಿ ರೂ.4,88,866-00 ಬೇಕಾಗುವುದು. ಸದರಿ ಹುದ್ದೆಗಳನ್ನು ತುಂಬುವ ತನಕ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿರುವ ಉಪ ನಿರ್ದೇಶಕರು (ಕ್ರೀಡೆ) ಇವರು ವಿದ್ಯಾನಗರದ ಕ್ರೀಡಾ ಶಾಲೆಯನ್ನು ಮತ್ತು ಕೊಡಿಗೆಯಲ್ಲಿರುವ ಕ್ರೀಡಾ ಶಾಲೆಯನ್ನು ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾ ಅಧಿಕಾರಿ ಮಡಿಕೇರಿ ಇವರುಗಳು ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.

ಉ) 1) ಮಾರುತಿ ಕಾರ್ (ಎಸ್‌ಟಿಮ್) - 2

2) ಮಾರುತಿ ವ್ಯಾನುಗಳು - 2

3) ಮಹೇಂದ್ರ 540 ಜೀಪು - 1

4) ಮಿಸುತುಬಿಸಿ (ಮಿನಿ ವ್ಯಾನು) - 1

5) ಅಂಬಾಸಿಡರ್ ಕಾರ್ (ಡೀಸಲ್) - 2

ಇಲಾಖೆಯು ವಾಹನಗಳನ್ನು ವಹಿಕೊಂಡಿರುವುದಿಲ್ಲ ಆದುದರಿಂದ ಕ್ರೀಡಾ ತರಬೇತಿಗಳಿಗೆ ಅಂಬಾಸಿಡರ್ ಕಾರ್ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ದೇವರಾಜ ಅರಸು ಕ್ರೀಡಾಭಿವೃದ್ಧಿ ಸಂಸ್ಥೆಯನ್ನು ಹುಣಸೂರಿನಲ್ಲಿ ಪ್ರಾರಂಭಿಸುವುದು.

2324 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವರಾಜ ಅರಸು ಕ್ರೀಡಾಭಿವೃದ್ಧಿ ಸಂಸ್ಥೆ ಯಾವಾಗ ಪ್ರಾರಂಭಿಸಲಾಯಿತು? ಎಲ್ಲಿ ಪ್ರಾರಂಭಿಸಲಾಯಿತು?

ಆ) 1993-94ನೇ ಸಾಲಿನ ಬಜೆಟ್ ಭಾಷಣದಲ್ಲಿ ಹುಣಸೂರಿನಲ್ಲಿ ಪ್ರಾರಂಭಿಸಲು ತಿಳಿಸಿ ಬೇರೆ ಕಡೆ ಪ್ರಾರಂಭಿಸಲು ಕಾರಣವೇನು?

ಇ) ದೇವರಾಜ ಅರಸರ ಕ್ಷೇತ್ರವಾದ ಹುಣಸೂರು (ಮೈಸೂರು ಜಿಲ್ಲೆ) ಇಲ್ಲಿಗೆ ವಿದ್ಯಾನಗರದಿಂದ ವರ್ಗಾಯಿಸಿ ಪ್ರಾರಂಭಿಸಲಾಗುವುದೇ? ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು?

ಈ) 1993-94, 1995-96, 1996-97ನೇ ಸಾಲಿಗೆ ಈ ಸಂಸ್ಥೆಗೆ ನಿಗಧಿಮಾಡಲಾದ ಹಣವೆಷ್ಟು ? ಹಾಗಿದ್ದಲ್ಲಿ ಮಾಡಲಾಗಿರುವ ಕಾರ್ಯಕ್ರಮಗಳೇನು? ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗಿದೆ? ಯಾವ ಯಾವ ದಿನಾಂಕದಂದು ಪಾವತಿಸಲಾಗಿದೆ?

ಉ) 1997-98ನೇ ಸಾಲಿಗೆ ವಿದ್ಯಾನಗರದಿಂದ ಹುಣಸೂರಿಗೆ ವರ್ಗಾಯಿಸಿದರೆ, ಉಚಿತ ನಿವೇಶನ, ಗ್ರಾಮೀಣ ಪ್ರದೇಶದ ಜನರಿಗೆ ದೇವರಾಜ ಅರಸರ ಹೆಸರಿನಲ್ಲಿ ಕಾರ್ಯಕ್ರಮ ನೆರವು ದೊರೆತು ಸರ್ಕಾರಕ್ಕೆ ಕೀರ್ತಿಬಂದು, ದೇವರಾಜ ಅರಸರ ನೆನಪಿಗೆ ಗೌರವತಂದಂತಾಗುವುದಿಲ್ಲವೆ?

ಊ) ಶ್ರೀ ಡಿ. ದೇವರಾಜ ಅರಸರ ಹೆಸರಿನಲ್ಲಿ ವಿದ್ಯಾನಗರದಲ್ಲಿ ಒಂದು ಕಟ್ಟಡ ವಿನಃ ಯಾವುದೇ ಕಾರ್ಯಕ್ರಮ ಜಾರಿಗೊಳಿಸದೆ ಪೂರ್ಣ ಹಣ ದುರುಪಯೋಗವಾಗಿರುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಶ್ರೀ ದೇವರಾಜ ಅರಸು ಕ್ರೀಡಾ ಮತ್ತು ಯುವಜನಾಭಿವೃದ್ಧಿ ಸಂಸ್ಥೆಯನ್ನು ಸರ್ಕಾರಿ ಆದೇಶ ಸಂಖ್ಯೆ ದಾಪ್ರಯು:159 : ಯುಸೇಕ್ರಿ:93, ಬೆಂಗಳೂರು ದಿನಾಂಕ : 28-3-1995ರ ಪ್ರಕಾರ ವಿದ್ಯಾನಗರ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವಕ ಕೇಂದ್ರದಲ್ಲಿ 95-96ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಆ) ಮಾನ್ಯ ಮುಖ್ಯಮಂತ್ರಿಗಳು 93-94ನೇ ಸಾಲಿನ ಆಯವ್ಯಯ ಭಾಷಣ ಮಾಡುತ್ತಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸೇರಿದ ವಿದ್ಯಾನಗರದಲ್ಲಿರುವ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ಕೇಂದ್ರದಲ್ಲಿ ಒಂದು ಕ್ರೀಡಾ ಮತ್ತು ಯುವಜನಾಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸುವುದಾಗಿ ಘೋಷಿಸಿದ್ದರು. ಆದರೆ ಹುಣಸೂರಿನಲ್ಲಿ ಪ್ರಾರಂಭಿಸಲಾಗುವುದೆಂದು ತಿಳಿಸಿರುವುದಿಲ್ಲ.

ಇ) ವಿದ್ಯಾನಗರ ಯುವಜನ ಕೇಂದ್ರದಲ್ಲಿ ಸಂಸ್ಥೆಯ ಚಟುವಟಿಕೆಗಳಿಗೆ ವಸತಿ ಮತ್ತು ತರಬೇತಿ ಸೌಕರ್ಯಗಳು ದೊರೆಯುವುದರಿಂದ ಸಂಸ್ಥೆಯನ್ನು ವಿದ್ಯಾನಗರದಲ್ಲಿಯೇ ಮುಂದುವರೆಸುವುದು ಸೂಕ್ತವಾಗಿರುತ್ತದೆ?

ಈ) 1993-94, 95-96 ಹಾಗೂ 96-97ನೇ ಸಾಲಿನಲ್ಲಿ ಶ್ರೀ ಡಿ.ದೇವರಾಜ ಅರಸ್ ಸಂಸ್ಥೆಗೆ ನಿಗದಿ ಪಡಿಸಿದ ಹಣ ಮಾಡಲಾದ ಕಾರ್ಯಕ್ರಮ, ಸದರಿ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾದ ಹಣದ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಉ) ಹೌದು, ವಿದ್ಯಾನಗರ ಯುವಜನ ಕೇಂದ್ರದಲ್ಲಿ ಸಂಸ್ಥೆಯ ಚಟುವಟಿಕೆಗಳಿಗೆ ವಸತಿ ಮತ್ತು ತರಬೇತಿ ಸೌಕರ್ಯಗಳು ದೊರೆಯುವುದರಿಂದ ಸಂಸ್ಥೆಯನ್ನು ವಿದ್ಯಾನಗರದಲ್ಲಿಯೇ ಮುಂದುವರೆಸುವುದು ಸೂಕ್ತವಾಗಿರುತ್ತದೆ.

ಊ) ಶ್ರೀ ಡಿ. ದೇವರಾಜ ಅರಸ್ ಸಂಸ್ಥೆಗೆ ಅವಶ್ಯ ವಿರುವ ಕಟ್ಟಡವನ್ನು ನಿರ್ಮಿಸಿರುವುದಲ್ಲವೆ ಸಂಸ್ಥೆಗೆ ಪೀಠೋಪಕರಣ, ತರಬೇತಿ ಸಾಧನ ಹಾಗೂ ವಾಚನಾಲಯ ಸೌಲಭ್ಯ ಒದಗಿಸಲಾಗಿದೆ ಕಾರ್ಯಕ್ರಮಗಳಿಗೆ ಅಗತ್ಯ ವಿರುವ ಕಟ್ಟಡ ಮತ್ತು ವಸತಿ ಸೌಕರ್ಯವಿದೆ. 1996-97ರ ಸಾಲಿನಲ್ಲಿ 15 ಪ್ರಶಿಕ್ಷಕರನ್ನು ಆಯ್ಕೆ ಮಾಡಿ ಅವರುಗಳಿಗೆ ದಿನಾಂಕ : 23-12-1996 ರಿಂದ 3-1-1997ರವರೆಗೆ ಪ್ರತಿಕ್ಷಕರ ತರಬೇತಿ ನೀಡಲಾಗಿದೆ. ಅಲ್ಲದೆ ಈ ಸಂಸ್ಥೆಯ ತರಬೇತಿ ಕಾರ್ಯಕ್ರಮಕ್ಕೆ 'ಯುವ ಪ್ರೇರಣಾ' ಎಂದು ಹೆಸರಿಟ್ಟು ದಿನಾಂಕ : 14-2-1997 ರಿಂದ 21-2-1997ರವರೆಗೆ ಮೊದಲನೆ ತರಬೇತಿ ಶಿಬಿರವನ್ನು ನಡೆಸಲಾಗಿದೆ. ಈ ಶಿಬಿರದಲ್ಲಿ ಒಟ್ಟು 44 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಈ ಸಂಸ್ಥೆಗೆ ಬಿಡುಗಡೆಯಾದ ಹಣದಲ್ಲಿ ಯಾವುದೇ ರೀತಿಯ ದುರುಪಯೋಗವಾಗಿರುವುದಿಲ್ಲ.

TABLE PG No. 72-73

pg1-2 in wide

ಅನುಬಂಧ

ವರ್ಷ	ನಿಗಧಿಪಡಿಸಿದ ಹಣ	ಖರ್ಚಾದ ಹಣ	ಕಾರ್ಯಕ್ರಮ	ವೆಚ್ಚ	ಪಾವತಿ ದಿನಾಂಕ
1	2	3	4	5	6
1993-94	-	-	-	-	-
1994-95	6,00,000	6,00,000	1) ಶ್ರೀ. ದೇವರಾಜ್‌ಅರಸ್ ಸಂಸ್ಥೆಯನ್ನು ತರೆಯಲು ಎಸಿ ಬಿಲ್ ನಂ. 28:94-95	2,45,000	16-10- 95 ರಿಂದ 24-5-97.
			2) ಶ್ರೀ ಡಿ.ದೇವರಾಜ್‌ಅರಸ್ ಸಂಸ್ಥೆಯಲ್ಲಿ ವಾಚನಾಲಯ ಸ್ಥಾಪಿಸುವ ಮತ್ತು ಸಂಸ್ಥೆಗೆ ತರಬೇತಿ ಸಾಧನೆಗಳನ್ನು ಒದಗಿಸುವ ಸಲುವಾಗಿ ಎಸಿ ಬಿಲ್ ನಂ. 29: 94-95	4,00,000	28-11-96 ರಿಂದ 24-5-97.
1995-96	5,00,000	1,00,000	1) ಶ್ರೀ ಡಿ.ದೇವರಾಜ್‌ಅರಸ್ ಸಂಸ್ಥೆಗೆ ಪೀಠೋಪಕರಣಗಳನ್ನು ಒದಗಿಸುವ ಸಲುವಾಗಿ ಎಸಿ.ಬಿಲ್. ನಂ. 31:95-96	1,00,000	23-5-97 ಮತ್ತು 18-6-97.
1996-97	8,00,000	4,51,464-00	1) ಶ್ರೀ ಡಿ.ದೇವರಾಜ್‌ಅರಸ್ ಸಂಸ್ಥೆಯ ಸಭೆ ನಡೆಸುವ ಸಲುವಾಗಿ ಡಿಸಿಬಿಲ್ ನಂ. 9:96-97	2073	1-6-96 ರಿಂದ 19-6-96
			2) ವಾಹನ ಚಾಲಕರ ವೇತನ	37,276	1-4-96 ರಿಂದ 31-3-97
			3) ಲಾಜ್‌ಕಲ್ ಫ್ರೇಂ ವರ್ಕ್ ಕಾರ್ಯಗಾರ ನಡೆಸುವ ಸಲುವಾಗಿ ಡಿಸಿ.ಬಿಲ್. ನಂ. 31:96-97	4,526	22-8-96 ರಿಂದ 24-10-96

1	2	3	4	5	6
			4) ಯುವ ಪ್ರೇರಣಾ ಪ್ರಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ- ಎಸಿ ಎಲ್ ನಂ. 23 : 96-97	60,000	21-11-96 ರಿಂದ 24-4-97
			5) ಯುವ ಪ್ರೇರಣಾ ತರಬೇತಿ ಶಿಬಿರ ನಡೆಸುವ ಸಲುವಾಗಿ ಎಸಿಬಿಲ್ ನಂ. 28 : 96-97	36,000	12-2-97 ರಿಂದ 12-3-97
			6) ಯುವ ಪ್ರೇರಣಾ ತರಬೇತಿ ಶಿಬಿರ ನಡೆಸಲು ತಗುಲಿದ ಹೆಚ್ಚಿನ ವೆಚ್ಚದ ಬಿಲ್ಲುಗಳನ್ನು ಪಾವತಿಸುವ ಸಲುವಾಗಿ ಡಿಸಿ ಬಿಲ್ ನಂ. 69 : 96-97	2,925	12-2-97 ರಿಂದ 21-2-97
			7) ದೇವರಾಜ್ ಅರಸ್ ಸಂಸ್ಥೆಗೆ ವಿಡಿಯೋ ಪ್ರೊಜೆಕ್ಷನ್ ಟಿ.ವಿ ಖರೀದಿಸುವ ಸಲುವಾಗಿ ಎಸಿಬಿಲ್ ನಂ. 42 : 96-97	2,08,664	18-6-97
			8) ಶ್ರೀ ದೇವರಾಜ್ ಅರಸ್ ಸಂಸ್ಥೆಗೆ ಗಣಕಯಂತ್ರ ಖರೀದಿಸುವ ಸಲುವಾಗಿ ಎಸಿಬಿಲ್ ನಂ. 43 : 96-97	1,00,000	17-6-97